# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 503

ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 30.01.2026

ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಂಕಣಿ ಭವನಕ್ಕೆ ಮಂಜೂರಾದ ಅನುದಾನ ಎಷ್ಟು; ಖರ್ಚು ಮಾಡಿದ ಅನುದಾನ ಎಷ್ಟು; ಬಾಕಿ ಇರುವ ಹಣ ಎಷ್ಟು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಸಂವಾ 47 ಕೆ.ಒ.ಎಲ್ ಆಕ 2021, ದಿನಾಂಕ:02.12.2021ರಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಕೊಂಕಣಿ ಭವನದ ನಿರ್ಮಾಣಕ್ಕೆ ರೂ.300.00 ಲಕ್ಷಗಳ ಅಂದಾಜು ಪಟ್ಟಿಗೆ ಸೀಮಿತಗೊಳಿಸಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಬಿಡುಗಡೆ ಮಾಡಲು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.<br><br>ಸದರಿ ಪೂರ್ಣ ಅನುದಾನವನ್ನು ಜಿಲ್ಲಾಧಿಕಾರಿಗಳು ದಕ್ಷಿಣ ಜಿಲ್ಲೆರವರಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆದೇಶ ಸಂಖ್ಯೆ: ಕಗಪಅಪ್ರಾ/59/ಅ/2019-20, ದಿನಾಂಕ: 09.01.2020ರಲ್ಲಿ ಬಿಡುಗಡೆ ಮಾಡಲಾಗಿದ್ದು, ಹಾಗೂ ಪತ್ರ ಸಂಖ್ಯೆ: ಕಗಪಅಪ್ರಾ/62/ಅ/2019-20, ದಿನಾಂಕ:22.05.2025ರಲ್ಲಿ ಬಿಡುಗಡೆಯಾದ ಅನುದಾನದ ಮಿತಿಯಲ್ಲಿಯೇ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಷರತ್ತು ವಿಧಿಸಲಾಗಿದೆ. |
| (ಆ) | ಕೊಂಕಣಿ ಅಕಾಡೆಮಿ ಕಟ್ಟಡ ಕಾಮಗಾರಿ ಪೂರ್ಣಗೊಳಿಸದೇ ಕಳೆದ 4 ವರ್ಷಗಳಿಂದ ಹುಲ್ಲು ಬೆಳೆದು ಕಟ್ಟಡ ಕಾಣಿಸದಿರುವ ಪರಿಸ್ಥಿತಿ ಬಂದಿದ್ದು, ಸದನದಲ್ಲಿ ಆಶ್ವಾಸನೆ ನೀಡಿದ್ದರೂ, ಸಹ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು; | ಮಂಗಳೂರು ನಗರದಲ್ಲಿ ಕೊಂಕಣಿ ಅಕಾಡೆಮಿ ಕಟ್ಟಡ ನಿರ್ಮಾಣ ಮಾಡಲು ದಿನಾಂಕ:09.1.2020 ರಂದು ಅನುದಾನ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಯ ಅನುಷ್ಠಾನ ಏಜೆನ್ಸಿಯು ಲೋಕೋಪಯೋಗಿ ಇಲಾಖೆಯಾಗಿರುತ್ತದೆ. ಈಗಾಗಲೇ ರೂ.269.54 ಲಕ್ಷಗಳನ್ನು ವೆಚ್ಚ ಮಾಡಿ, ಬಿಡುಗಡೆಯಾಗಿರುವ ರೂ.30.40 ಲಕ್ಷಗಳು ಅನುಷ್ಠಾನ ಏಜೆನ್ಸಿಯಲ್ಲಿ ಬಾಕಿ ಇರುತ್ತದೆ. ಸ್ಥಳೀಯ ಜಿಲ್ಲಾಡಳಿತವು ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗಡಿ ಅಭಿವೃದ್ಧಿ ಪ್ರಾಧಿಕಾರ ರವರು ಸ್ಥಳಕ್ಕೆ ಭೇಟಿ ನೀಡಿ ಅನುಷ್ಠಾನ ಏಜೆನ್ಸಿಯು ಅಗತ್ಯ ತುರ್ತು ಕ್ರಮವಹಿಸಲು ದಿನಾಂಕ:02.05.2025ರಂದು ಸೂಚನೆ ನೀಡಲಾಗಿರುತ್ತದೆ. ಸದರಿ ಕಟ್ಟಡ ಪ್ರಗತಿ ಕುರಿತು ದಿನಾಂಕ:25.09.2025ರಂದು ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಇವರು ಜಿಲ್ಲಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಸಭೆ ನಡೆಸಿ ಅಗತ್ಯ ಸೂಚನೆ ನೀಡಿರುತ್ತಾರೆ. |

| | | |
|---|---|---|
| ಇ) | ಕೊಂಕಣಿ ಭಾಷಿಕರನ್ನು ಉದ್ದೇಶಪೂರ್ವಕವಾಗಿ ಸರ್ಕಾರ ನಿರ್ಲಕ್ಷಿಸುತ್ತಿದೆಯೇ; ಇದಕ್ಕೆ ಕಾರಣವೇನು; | ಸರ್ಕಾರದ ವತಿಯಿಂದ ಕೊಂಕಣಿ ಭಾಷೆ, ಕಲೆ, ಸಂಸ್ಕೃತಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಈಗಾಗಲೇ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಲಾಗಿರುತ್ತದೆ.<br><br>ಸದರಿ ಅಕಾಡೆಮಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಿದ್ದು, ಅಕಾಡೆಮಿಯ ಕಾರ್ಯ ಚಟುವಟಿಕೆಗೆ ಪ್ರತಿ ವರ್ಷ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. |
| ಈ) | ಕೊಂಕಣಿ ಅಕಾಡೆಮಿಯ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕೊಂಕಣಿ ಕಲಿಸಲು ಮಾಡುತ್ತಿರುವ ಪ್ರಯತ್ನಗಳಾವುವು; ಕೊಂಕಣಿ ಭಾಷೆಯನ್ನು ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಕೊಂಕಣಿ ಅಕಾಡೆಮಿ ವತಿಯಿಂದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕೊಂಕಣಿ ಕಲಿಸುತ್ತಿರುವುದಿಲ್ಲವಾದ್ದರಿಂದ ಕೊಂಕಣಿ ಭಾಷೆಯನ್ನು ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯ ಪ್ರಶ್ನೆ ಉದ್ಭವಿಸುವುದಿಲ್ಲ. |
| ಉ) | ಕೊಂಕಣಿ ಅಕಾಡೆಮಿಗೆ ಮಂಜೂರಾದ ಹುದ್ದೆಗಳೆಷ್ಟು; ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು? (ವಿವರ ನೀಡುವುದು) | ಕೊಂಕಣಿ ಅಕಾಡೆಮಿಗೆ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಮತ್ತು ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ: ಕಸಂವಾ 09 ಕೆಬಿಎಲ್ ಆಕ 2026

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

435.pdf

# ಅನುಬಂಧ 1

| ಕ್ರ.ಸಂ. | ಅಕಾಡೆಮಿ/ ಪ್ರಾಧಿಕಾರ | ವೃಂದ ಮತ್ತು ಹುದ್ದೆ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|---|
| 1 | ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ | ರಿಜಿಸ್ಟ್ರಾರ್- ಬಿ ದರ್ಜೆ | 1 | 0 | 1 | |
| 2 | | ಕಚೇರಿ ಅಧೀಕ್ಷಕರು - ಸಿ ದರ್ಜೆ | 1 | 0 | 1 | |
| 3 | | ಪ್ರಥಮ ದರ್ಜೆ ಸಹಾಯಕರು- ಸಿ ದರ್ಜೆ | 1 | 0 | 1 | |
| 4 | | ದಲಾಯತ್- ಡಿ ದರ್ಜೆ | 1 | 1 | 0 | |
| | ಒಟ್ಟು | | 4 | 1 | 3 | |

ರಿಜಿಸ್ಟ್ರಾರ್
ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ

file:///C:/Users/ADMIN/Downloads/435.pc